ಓ.ಎಸ್. ನಂ.03/2019 ರಲ್ಲಿ
ಪಿ.ಡಬ್ಲ್ಯೂ-1(ದಕ್ಷಿಣ ಮೂರ್ತಿ)

ದಿನಾಂಕ 10-03-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ರಿಂದ 6ನೇ ಪ್ರತಿವಾದಿಗಳ ಪರ ಶ್ರೀ ಎನ್.ಎಸ್.ಎಸ್., ವಕೀಲರಿಂದಃ-

ನಮ್ಮ ಮತ್ತು ಪ್ರತಿವಾದಿಗಳ ನಡುವೆ ಸಂಬಂಧವನ್ನು ಸಾಬೀತುಪಡಿಸುವ ವಂಶವೃಕ್ಷವನ್ನು ಸಂಬಂಧಪಟ್ಟ ರೆವಿನ್ಯೂ ಅಧಿಕಾರಿಗಳಿಂದ ಪಡೆದು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿದ್ದೇನೆ. ನನ್ನ ಹೆಸರು ದಕ್ಷಿಣ ಮೂರ್ತಿ. ನನಗೆ ಈಗ 75 ವರ್ಷ ವಯಸ್ಸು. 1ನೇ ವಾದಿ ನನಗಿಂತ ಎರಡು ವರ್ಷ ದೊಡ್ಡವರು. ನನ್ನ ತಂದೆ ರುದ್ರಾಚಾರಿರವರು ತೊರೆಬೊಮ್ಮನಹಳ್ಳಿ ಗ್ರಾಮದಲ್ಲಿ ಹುಟ್ಟಿ ಅಲ್ಲೇ ಬೆಳೆದರು. ನನ್ನ ತಂದೆ-ತಾಯಿಗೆ ನಾವು 4 ಜನ ಮಕ್ಕಳು, ಅವರೆಂದರೆ ರಾಜಣ್ಣ, ಆತನಿಗೆ ಮದುವೆಯಾಗಿರಲಿಲ್ಲ, ಆತ ನಾನು ಜನಿಸುವ ಮುಂಚೆಯೇ ತೀರಿಕೊಂಡಿದ್ದರು. ಎರಡನೇಯವರು ಮಾಯಗಾನಹಳ್ಳಿಯ ಸುಂದರಾಚಾರಿ, ನಂತರ ನನ್ನ ಅಣ್ಣ ಗೌರಯ್ಯ, ಅವರು ಈ ದಾವೆ ಸಲ್ಲಿಸುವ ಮುಂಚೆಯೇ 10-12 ವರ್ಷಗಳ ಹಿಂದೆಯೇ ತೀರಿಕೊಂಡಿದ್ದರು. ನಂತರ 1ನೇ ವಾದಿ ನಾಗೇಂದ್ರಚಾರಿ, ಅವರ ನಂತರ ನಾನು.

2. ನನ್ನ ತಂದೆ ರುದ್ರಾಚಾರಿ ತೊರೆಬೊಮ್ಮನಹಳ್ಳಿಯಲ್ಲಿ ತೀರಿಕೊಂಡರು. ನನ್ನ ತಂದೆ ತೀರಿಕೊಳ್ಳುವ ಕಾಲಕ್ಕೆ ಅವರಿಗೆ 80 ವರ್ಷ ವಯಸ್ಸಾಗಿತ್ತು. ನನ್ನ ತಂದೆ ತೀರಿಕೊಂಡು ಇವತ್ತಿಗೆ 20 ವರ್ಷಗಳಾಗಿರಬಹುದು. ನನ್ನ ತಾಯಿ ಗೌರಮ್ಮ ತೀರಿಕೊಂಡಿದ್ದಾರೆ. ನನ್ನ ತಾಯಿ ನಾನು ಹುಟ್ಟಿದ 6 ತಿಂಗಳಿಗೆ ತೀರಿಕೊಂಡರು. ನಾನೇ ಕೊನೆಯ

ಮಗ. ನನ್ನ ತಾಯಿ ಗೌರಮ್ಮನ ತಂದೆಯ ಹೆಸರು ರುದ್ರಾಚಾರಿ. ನನ್ನ ತಂದೆಯ ಹೆಸರು ಸಹ ರುದ್ರಾಚಾರಿ. ನನ್ನ ತಾಯಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ, ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ. ನನ್ನ ತಾಯಿಯ ತಂದೆ ರುದ್ರಾಚಾರಿಯ ತಂದೆಯ ಹೆಸರು ವೀರಾಚಾರಿ ಎಂದರೆ ಸರಿ. ನನ್ನ ತಾಯಿಯ ತಂದೆಯ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಾಯಿಯ ತಂದೆಯ ಕುಟುಂಬದ ವಂಶವೃಕ್ಷದ ಬಗ್ಗೆ ವಾದಪತ್ರದಲ್ಲಿ ಹೇಳಿಲ್ಲ ಹಾಗೂ ವಂಶವೃಕ್ಷವನ್ನು ಹಾಜರುಪಡಿಸಿಲ್ಲ, ಕೆಲವು ದಾವಾ ಸ್ವತ್ತುಗಳು ನಿಮ್ಮ ತಾಯಿಯ ತಂದೆಗೆ ಸೇರಿದ ಆಸ್ತಿಗಳು ಎಂದು ಇದೆ, ಆದ್ದರಿಂದ ವಂಶವೃಕ್ಷವನ್ನು ನೀವು ಹಾಜರುಪಡಿಸಬೇಕಿತ್ತು ಎಂದರೆ ಸಾಕ್ಷಿಯು ಕೊಟ್ಟಿದೆ ಎಂದು ನುಡಿಯುತ್ತಾರೆ.

3. ನನ್ನ ತಾಯಿ, ನನ್ನ ತಂದೆ, ನನ್ನ ತಾಯಿಯ ತಂದೆ, ತಾಯಿರವರ ಮರಣ ಪ್ರಮಾಣಪತ್ರಗಳನ್ನು ನಾನು ಉದ್ದೇಶಪೂರ್ವಕವಾಗಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಮೃತಪಟ್ಟಿರುವ ನನ್ನ ಸಹೋದರರ ಮರಣ ಪ್ರಮಾಣಪತ್ರಗಳನ್ನು ಸಹ ನಾನು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ತಂದೆ ರುದ್ರಾಚಾರಿರವರು ಕೃಷಿಯ ಜೊತೆ ವಿಗ್ರಹಗಳನ್ನು ಮಾಡುವ ಕೆಲಸ ಮಾಡುತ್ತಿದ್ದರು. ನನ್ನ ತಾಯಿಯ ತಂದೆ ರುದ್ರಾಚಾರಿರವರು ಹುಟ್ಟಿನಿಂದಲೂ ಮಾಯಗಾನಹಳ್ಳಿಯಲ್ಲಿ ವಾಸವಿದ್ದರು ಎಂದರೆ ಸರಿ. ಆತ ಹೊಲದಲ್ಲಿ ತನ್ನ ಭಾಗದಲ್ಲಿ ಒಂದು ಮನೆ ಕಟ್ಟಿಕೊಂಡು ವಾಸವಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಅಣ್ಣ

ಎಲ್ಲರೂ ಬಂದು ನಿಂತು ಮನೆ ಕಟ್ಟಿದರು ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ನನ್ನ ಅಣ್ಣನೂ ಸಹ ನಿಂತು ಕಟ್ಟಿದನು ಎಂದು ಇಂದು ನಾನು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಮೃತಪಟ್ಟಿರುವ ನನ್ನ ಸಹೋದರರ ಮೃತಪಟ್ಟ ದಿನಾಂಕಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲದ ಕಾರಣ ದಾವೆಯನ್ನು ಸರಿಯಾದ ರೀತಿಯಲ್ಲಿ ತೀರ್ಮಾನ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ.

4. 7 ಮತ್ತು 8 ನೇ ಪ್ರತಿವಾದಿಗಳು ಸಹ ತೊರೆಬೊಮ್ಮನಹಳ್ಳಿಯಲ್ಲೇ ವಾಸ. ನಾನು, ನನ್ನ ಅಣ್ಣ, ಗೌರಯ್ಯನ ಮಕ್ಕಳು 20 ವರ್ಷಗಳ ಮೇಲಿನಿಂದಲೂ ಬೇರೆ ಬೇರೆಯಾಗಿ ಬೇರೆ ಬೇರೆ ವಾಸವಿದ್ದೇವೆ. ಬೇರೆ ಬೇರೆ ಆಗಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಪಟೇಲರು, ಶಾನುಭೋಗರು ತೋರಿಸಿದ ಜಾಗದಲ್ಲಿ ಉಳುಮೆ ಮಾಡಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆ ರುದ್ರಾಚಾರಿರವರು ಕೃಷಿ ಕೆಲಸ ಮತ್ತು ವ್ಯವಸಾಯದ ಉಪಕರಣಗಳನ್ನು ಮಾಡವ ಕೆಲಸ ಮಾಡುತ್ತಿದ್ದರು. ನನ್ನ ಅಣ್ಣ ನಾಗೇಂದ್ರಚಾರಿ ಹಾಗೂ ನಾನು ಸಹ ಕೃಷಿ ಕೆಲಸ ಮಾಡುತ್ತೇವೆ. ಪ್ರತಿವಾದಿ 1 ರವರ ಗಂಡ, ಪ್ರತಿವಾದಿ 2 ರಿಂದ 6 ರವರ ತಂದೆ ಸುಂದರಾಚಾರಿರವರಿಗೆ ತೊರೆಬೊಮ್ಮನಹಳ್ಳಿಯಲ್ಲಿ ಮನೆ ಇತ್ತಾ ಎಂದರೆ ಸಾಕ್ಷಿಯು ಮನೆ ಇರಲಿಲ್ಲ ಎಂದು ನುಡಿಯುತ್ತಾರೆ. ಮದುವೆಯಾಗುವ ಮುಂಚಿನಿಂದಲೂ ಮಾಯಗಾನಹಳ್ಳಿಯಲ್ಲಿ ವಾಸವಿದ್ದರು, ತೊರೆಬೊಮ್ಮನಹಳ್ಳಿಯಲ್ಲಿ ವಾಸವಿರಲಿಲ್ಲ. ಸುಂದರಾಚಾರಿಗೆ 15-16 ವರ್ಷವಿದ್ದಾಗ ಅವರು ಮಾಯಗಾನಹಳ್ಳಿಗೆ ಬಂದರು. ಅಲ್ಲಿ ಅವರ ತಾಯಿಯ ತಂದೆ ಮತ್ತು ತಾಯಿಯ ತಾಯಿಯ ಮನೆಯಲ್ಲಿದ್ದರು. ಸುಂದರಾಚಾರಿ ಕೃಷಿ ಕೆಲಸ

ಮಾತ್ರ ಮಾಡುತ್ತಿದ್ದರು. ಅಂದರೆ ರುದ್ರಾಚಾರಿ ಮತ್ತು ಗೌರಮ್ಮನ ಮನೆಯಲ್ಲಿ ವ್ಯವಸಾಯ ಮಾಡಿಕೊಂಡು ಅಲ್ಲೇ ಇದ್ದರು.

5. ತೊರೆಬೊಮ್ಮನಹಳ್ಳಿಯಲ್ಲಿ ಗೌರಯ್ಯ ಮತ್ತು ನನಗೆ ಬೇರೆ ಬೇರೆ ಮನೆಗಳಿವೆ. ಗೌರಯ್ಯನದ್ದು ನಾಡಹಂಚಿನ ಮನೆ, ನನ್ನದು ಸಹ ನಾಡಹಂಚಿನ ಮನೆ. ನಾಗೇಂದ್ರಚಾರಿರವರ ಮನೆಯು ಸಹ ನಾಡಹಂಚಿನ ಮನೆ. ಗೌರಯ್ಯ ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದರು. ಅವರು ಮದುವೆಯಾದ ನಂತರ ಚಿಲ್ಲರೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಅಂಗಡಿಯನ್ನು ಈಗಲೂ ನನ್ನ ಅಣ್ಣನ ಪತ್ನಿ ನೋಡಿಕೊಳ್ಳುತ್ತಿದ್ದಾರೆ. ತೊರೆಬೊಮ್ಮನಹಳ್ಳಿಯಲ್ಲಿ ಸುಂದರಾಚಾರಿಗೆ ಸ್ವತ್ತನ್ನು ಕೊಟ್ಟಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಭೋಗ್ಯ ಹಾಕಿರುವ ದಾಖಲೆ ಇದೆ ಎಂದು ನುಡಿಯುತ್ತಾರೆ. ಸುಂದರಾಚಾರಿಗೆ ತೊರೆಬೊಮ್ಮನಹಳ್ಳಿಯಲ್ಲಿ ನಮ್ಮ ತಂದೆ ಅವರಿಗೂ ಭಾಗ ಕೊಟ್ಟಿದ್ದರು. ಆ ಆಸ್ತಿಯನ್ನು 1 ನೇ ವಾದಿಗೆ ಭೋಗ್ಯ ಮಾಡಿದ್ದರು. ಸದರಿ ಭೋಗ್ಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿಲ್ಲ. ತೊರೆಬೊಮ್ಮನಹಳ್ಳಿಯಲ್ಲಿ ಪಡಿತರ ಚೀಟಿ, ಖಾತೆ, ಪಹಣಿ, ಮ್ಯುಟೇಶನ್ ಎಲ್ಲರ ಹೆಸರಲ್ಲೂ ಬೇರೆ ಬೇರೆ ಇದೆ. ತೊರೆಬೊಮ್ಮನಹಳ್ಳಿಯಲ್ಲಿ ನಮ್ಮಗಳ ನಡುವೆ ರಕ್ತ ಸಂಬಂಧ ಬಿಟ್ಟರೇ ಆಸ್ತಿಗಳ ಸಂಬಂಧ ಯಾವುದೇ ದಾಖಲೆ ಇಲ್ಲ.

5. ಸುಂದರಾಚಾರಿಯ ಹೆಸರಿನಲ್ಲಿ ತೊರೆಬೊಮ್ಮನಹಳ್ಳಿಯಲ್ಲಿ ಆಸ್ತಿಯ ಬಗ್ಗೆ ಹಾಗೂ ಆತನ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲ. ದಾವಾ ಸ್ವತ್ತುಗಳಲ್ಲಿ 1/4 ನೇ ಭಾಗ ಬರಬೇಕೆಂದು ಹಾಕಿದ್ದೇನೆ. ದಾವೆ

ಸಲ್ಲಿಸುವಾಗ ತೊರೆಬೊಮ್ಮನಹಳ್ಳಿಯ ಆಸ್ತಿಯ ವಿಷಯಗಳನ್ನು ವಾದಪತ್ರದಲ್ಲಿ ಬರೆದಿರಲಿಲ್ಲ, ಮಾಯಗಾನಹಳ್ಳಿಯ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮಾತ್ರ ಹೇಳಿದ್ದೆವು ಎಂದರೆ ಸರಿ. ಪ್ರತಿವಾದಿ 2 ರಿಂದ 6 ರವರು ಸಲ್ಲಿಸಿರುವ ಲಿಖಿತ ತಕರಾರು ಹಾಗೂ ಅವರು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಓದಿಸಿ, ತಿಳಿದುಕೊಂಡಿಲ್ಲ. ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ನಾನು ಇದುವರೆಗೂ ಓದಿಸಿ, ತಿಳಿದುಕೊಂಡಿಲ್ಲ.

6. ನನ್ನ ತಂದೆಯ ತಂದೆಯ ಹೆಸರು ಹುಚ್ಚಪ್ಪ. ಅವರು ಹುಟ್ಟಿನಿಂದ ಅದೇ ಊರಿನಲ್ಲಿ ವಾಸವಿದ್ದರು. ನನ್ನ ತಂದೆ ಅಥವಾ ನನ್ನ ತಾತ ರಾಮನಗರ ತಾಲ್ಲೂಕು, ಮಾಯಗಾನಹಳ್ಳಿಯಲ್ಲಿ ಯಾವುದೇ ಚರ, ಸ್ಥಿರ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ತಾಯಿಯ ತಂದೆಯಿಂದ ಬಂದ ಸ್ವತ್ತುಗಳು ಎಂದರೆ ಸರಿ. ನನ್ನ ತಾಯಿಯ ತಂದೆ ರುದ್ರಾಚಾರಿಗೆ ನಾಲ್ಕು ಜನ ಮಕ್ಕಳು, ಅವರೆಂದರೆ ರುದ್ರಮ್ಮ, ಕಾಮಾಕ್ಷಮ್ಮ, ಸಾವಿತ್ರಮ್ಮ ಮತ್ತು ನನ್ನ ತಾಯಿ ಗೌರಮ್ಮ. ನಾಲ್ಕು ಜನ ಹೆಣ್ಣು ಮಕ್ಕಳಿಗೂ ನನ್ನ ತಾತ ಆಸ್ತಿ ಕೊಟ್ಟಿದ್ದರು. ಈ ದಾವೆಯಲ್ಲಿ ನನ್ನ ತಾಯಿಯ ತಂದೆ ರುದ್ರಾಚಾರಿರವರು ನನ್ನ ತಾಯಿಗೆ ಕೊಟ್ಟಿದ್ದ ಆಸ್ತಿಗಳಲ್ಲಿ ಮಾತ್ರ ಭಾಗ ಬೇಕೆಂದು ಕೇಳಿದ್ದೇನೆ.

7. ನಿಪಿ-4 ರ ಕಾಲಕ್ಕೆ ದಿನಾಂಕ 08.08.1974 ಕ್ಕೂ ಮುಂಚೆಯೇ ನಮ್ಮ ಅಣ್ಣ, ತಮ್ಮಂದಿರ ನಡುವೆ ತೊರೆಬೊಮ್ಮನಹಳ್ಳಿಯ ಆಸ್ತಿಗಳ ಸಂಬಂಧ ವಿಭಾಗ ಆಗಿತ್ತು ಎಂದರೆ ಸರಿ. ಅದರಂತೆ ನಿಪಿ-4 ರಲ್ಲಿ ಹಿಸ್ಸೆಗಳನ್ನು ತೋರಿಸಿದ್ದಾರೆ ಎಂದರೆ ಸರಿ. 1 ನೇ ವಾದಿ ನನ್ನ ಪರವಾಗಿಯೂ ಕೇಸು

ಓ.ಎಸ್. ನಂ.03/2019 ರಲ್ಲಿ
ಪಿ.ಡಬ್ಲ್ಯೂ-1(ದಕ್ಷಿಣ ಮೂರ್ತಿ)

ನಡೆಸು ಎಂದು ನನಗೆ ಯಾವುದೇ ಅಧಿಕಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. 1ನೇ ವಾದಿ ನ್ಯಾಯಾಲಯಕ್ಕೆ ಬಂದರೆ ನಿಪಿ-4 ಪತ್ರದ ಬಗ್ಗೆ ಹೇಳಬೇಕಾಗುತ್ತದೆ, ಮಾಯಗಾನಹಳ್ಳಿಯ ಆಸ್ತಿಗಳ ಬಗ್ಗೆ ಹೇಳಬೇಕಾಗುತ್ತದೆಂದು 1ನೇ ವಾದಿಯ ಪರವಾಗಿಯೂ ನಾನೇ ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. 1ನೇ ವಾದಿಯ ಪರವಾಗಿಯೂ ನಾನು ಸಾಕ್ಷ್ಯ ನುಡಿಯಲು ಬರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.